ದಿನಾಂಕ 03.04.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ.ಎಸ್ ಆರ್ ಎಚ್ ವಕೀಲರಿಂದ

ಮೂಲ ಪುರುಷ ಯಲ್ಲಪ್ಪನ ಮಕ್ಕಳ ಮದ್ಯ ಹಿಸ್ಸೆ ಆಗಿದೆ ಎಂದರೆ ಸರಿ. ನಮ್ಮ ತಂದೆ ಬಸಪ್ಪನಿಗೆ 8 ಜನ ಮಕ್ಕಳು. 2 ನೇ ಪ್ರತಿವಾದಿ 2019 ರಲ್ಲಿ ಪೋತಿಯಾಗಿದ್ದಾಳೆ ಎಂದರೆ ಸರಿ. ಅವಳು ಪೋತಿಯಾದ ನಂತರ ಅವಳ ವಾರಸುದಾರರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಸೇರಿಸಿದ್ದೇನೆ ಅಂತಾ ನುಡಿಯುತ್ತಾರೆ.

ಈಗ ನನ್ನ ಹೆಸರಿನಲ್ಲಿ 8 ಎಕರೆ ಜಮೀನು ಇದೆ. ಸರಕಾರಿ ಸೌಲತ್ತು ಪಡೆಯಲು ನಮ್ಮ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಂಡಿರುತ್ತೇವೆ. ಸಾಕ್ಷಿಗೆ ಅಪಸಾತ ವಾಟ್ನಿ ಪತ್ರದ ದೃಡಿಕೃತ ನಕಲನ್ನು ತೋರಿಸಿ ಅದರಲ್ಲಿ ಸಾಕ್ಷಿ ತನ್ನ ಸಹಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಂದಾಯ ಇಲಾಖೆಯವರು ನೀಡಿದ ವರದಿಯ ದೃಡಿಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ಸಹ ತನ್ನ ಸಹಿಯನ್ನು ಗುರುತಿಸಿಕೊಂಡಿದ್ದು ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಡಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಯು ಫಾರ್ಮನ ದೃಡಿಕೃತ ನಕಲನ್ನು ತೋರಿಸಿದ್ದು ಅದರ ಮೇಲಿನ ಸಹಿಯನ್ನು ನಿರಾಕರಿಸಿರುತ್ತಾರೆ. ನಿಡಿ-1 ಮತ್ತು 2 ರ ಪ್ರಕಾರ ನಮ್ಮ ಹೆಸರಿಗೆ ಖಾತಾ ಬದಲಾವಣೆ ಯಾಗಿರುತ್ತವೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ನಂ. 9/1, 2 ಎಕರೆ 17 ಗುಂಟೆ, ಆಸ್ತಿ ನಂ. 10/6, 1 ಎಕರೆ, ಆಸ್ತಿ ನಂ. 14/1, 3 ಎಕರೆ 18 ಗುಂಟೆ, ಆಸ್ತಿ ನಂ. 9 ಬ, 14 ಗುಂಟೆ, ಆಸ್ತಿ ನಂ. 10, 3 ಎಕರೆ 10 ಗುಂಟೆ ನನ್ನ ಹೆಸರಿಗೆ ಖಾತೆ ಆಗಿವೆ ಎಂದರೆ ಸರಿ. ಈ ಎಲ್ಲಾ ಜಮೀನುಗಳು ನಿಡಿ-1 ಮತ್ತು 2 ರ ಪ್ರಕಾರ ನನ್ನ ಹೆಸರು ದಾಖಲಾಗಿದೆ ಎಂದರೆ ಸರಿ. ನಾನು ಈ ಎಲ್ಲಾ ಜಮೀನುಗಳ ಮೇಲೆ ಸಾಲ ಪಡೆದು ಸಾಲ ತೀರಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

ಇವತ್ತಿನವರೆಗೂ ಈ ಜಮೀನಿನ ಮೇಲೆ ಭೋಜಾ ಇದೆ ಎಂದರೆ ನಮ್ಮ ಹಿರಿಯರು ಪಡೆದ ಸಾಲದ ಕುರಿತು ಬೋಜಾ ಇರುತ್ತದೆ. ನಾನೇ ಸಾಲ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ರಿಸನಂ. 13/2 ರಲ್ಲಿ 3 ಎಕರೆ 16 ಗುಂಟೆ, 41/2 ರಲ್ಲಿ 4 ಎಕರೆ 22 ಗುಂಟೆ, 41/4 ರಲ್ಲಿ 1 ಎಕರೆ 10 ಗುಂಟೆ, 6/3 ಬಿ ರಲ್ಲಿ 3 ಎಕರೆ 10 ಗುಂಟೆ ಜಮೀನುಗಳು 3 ನೇ ವಾದಿ ಹೆಸರಿನಲ್ಲಿ ದಾಖಲಾಗಿವೆ ಎಂದರೆ ಸರಿ.

ರಿಸನಂ. 13/1 ರಲ್ಲಿ 3 ಎಕರೆ 8 ಗುಂಟೆ, 41/1 ರಲ್ಲಿ 5 ಎಕರೆ, 41/3 ರಲ್ಲಿ 1 ಎಕರೆ 10 ಗುಂಟೆ, 6/3 ಬಿ ರಲ್ಲಿ 1 ಎಕರೆ 20 ಗುಂಟೆ ಜಮೀನು ಕಲ್ಲಪ್ಪನ ಹೆಸರಿಗೆ ಹೋಗಿದೆ ಎಂದರೆ ಸರಿ. ರಿಸನಂ. 9/3 ರಲ್ಲಿ 2 ಎಕರೆ 18 ಗುಂಟೆ, 13/3 ರಲ್ಲಿ 2 ಎಕರೆ 5 ಗುಂಟೆ, 14/2 ರಲ್ಲಿ 3 ಎಕರೆ 17 ಗುಂಟೆ, 10/7 ರಲ್ಲಿ 1 ಎಕರೆ 20 ಗುಂಟೆ ಜಮೀನುಗಳು 1 ನೇ ವಾದಿಗೆ ಅಪಸಾತ ವಾಟ್ನಿ ಪ್ರಕಾರ ಹೋಗಿವೆ ಎಂದರೆ ಸಾಕ್ಷಿ ದಾಖಲೆಗಳು ಸುಳ್ಳು ಇವೆ ಅಂತಾ ನುಡಿಯುತ್ತಾರೆ. ಆ ಕಾಲಕ್ಕೆ ನಮ್ಮ ತಂದೆ ತನ್ನ ಪಾಲಿಗೆ ಒಂದು ಹಿಸ್ಸೆ ಇಟ್ಟುಕೊಂಡಿದ್ದ ಎಂದರೆ ಸರಿ. ಒಂದು ಎಕರೆ ನಮ್ಮ ತಂದೆ ಹೆಸರಿನಲ್ಲಿತ್ತು ಎಂದರೆ ಸರಿ ದಾಖಲಾತಿಗಳು ಎಲ್ಲಾ ಸುಳ್ಳು ಅಂತಾ ನುಡಿಯುತ್ತಾರೆ.

ವ್ಹಿಪಿಸಿ ನಂ. 60, 2 ಒಂದು ಟ್ರ್ಯಾಕ್ಟರ ಟ್ರೈಲರ ನಮ್ಮ ತಂದೆ ಹೆಸರಿಗೆ ಇತ್ತು ಎಂದರೆ ಸರಿ. 1 ನೇ ಪ್ರತಿವಾದಿ ಯಲ್ಲಪ್ಪನ ಹೆಸರಿಗೆ ಯಾವ ಆಸ್ತಿ ಹೋಗಿತ್ತು ಅಂತಾ ನೆನಪಿಲ್ಲ. ಆಸ್ತಿ ನಂ. 2/1 ಎ, 2 ಎಕರೆ 19 ಗುಂಟೆ, 15/5, 4 ಎಕರೆ 20 ಗುಂಟೆ, 60/1, 31 ಗುಂಟೆ, 60/2, 31 ಗುಂಟೆ, 10/7, ಅದರಲ್ಲಿ ಪಶ್ಚಿಮ ಭಾಗದ 2 ಎಕರೆ ಜಮೀನುಗಳು, ವ್ಹಿಪಿಸಿ ನಂ. 2 ಬಿ ಈ ಆಸ್ತಿಗಳು 1 ನೇ ಪ್ರತಿವಾದಿ ಯಲ್ಲಪ್ಪನಿಗೆ ವರದಿ ಪ್ರಕಾರ ಬಂದಿರುತ್ತವೆ ಎಂದರೆ ಸಾಕ್ಷಿಯು ಸುಮ್ಮನೆ ನಿಲ್ಲುತ್ತಾರೆ. ಈ ಪ್ರಕಾರ ಬಂದ ಆಸ್ತಿಗಳನ್ನು 1 ನೇ ಪ್ರತಿವಾದಿ ಒಬ್ಬನೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಆಸ್ತಿಗಳ ಮೇಲೆ ಸಾಲ ಪಡೆದಿದ್ದನು ಎಂದರೆ ಸಾಕ್ಷಿ ಪಡೆದಿರಬಹುದು ಅಂತಾ ನುಡಿಯುತ್ತಾರೆ. 1 ನೇ ಪ್ರತಿವಾದಿ ಪ್ರತಿವರ್ಷ ಸಾಲ ಪಡೆದು ಸಾಲ ತುಂಬುತ್ತಾ ಬಂದಿರುತ್ತಾನೆ ಎಂದರೆ ಸರಿ. 1996 ರಿಂದ ಇವತ್ತಿನವರೆಗೂ ಸದರಿ ಡ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ನನಗೆ ನೆನಪಿಲ್ಲ.

1 ನೇ ಪ್ರತಿವಾದಿ ಜಮೀನುಗಳ ಮೇಲೆ ಸಾಲ ಪಡೆದ ಬಗ್ಗೆ ತಕರಾರು ಎಲ್ಲಿಯೂ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸಾಲ ಪಡೆದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕಾರ 1, 3, 4 ನೇ ವಾದಿಯರೂ ಸಹ ತಮ್ಮ ಜಮೀನುಗಳ ಮೇಲೆ ಸಾಲ ಪಡೆದು ಮರು ಪಾವತಿ ಮಾಡಿರುತ್ತಾರೆ ಎಂದರೆ ಇರಬಹುದು. ನಮ್ಮ ತಂದೆಗೆ ಬಂದ ಆಸ್ತಿಗಳನ್ನು ಅವರು ಮರಣದ ನಂತರ ಅದು ಏನಾಗಿದೆ ಎಂದರೆ ಸಾಕ್ಷಿ ಅದು ಹಾಗೆ ಉಳಿದಿದೆ ಅಂತಾ ನುಡಿಯುತ್ತಾರೆ. ಆ ಆಸ್ತಿಯನ್ನು ಎಲ್ಲರೂ ಸೇರಿ ವಹಿವಾಟು ಮಾಡುತ್ತೇವೆ.

ನಾನು 5 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಓದಲು ಅಲ್ಪಸ್ವಲ್ಪ ಬರುತ್ತದೆ. ನಿಡಿ-1 ಕ್ಕೆ ಓದಿ ಸಹಿ ಮಾಡಿದ್ದೀಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬಹಳ ದಿನವಾಗಿದೆ ನೆನಪಿಲ್ಲ ಅಂತಾ ನುಡಿಯುತ್ತಾರೆ. ನಿಡಿ-1 ಕ್ಕೆ ವಾದಿ ನಂ. 1,3,4 ಮತ್ತು 1 ನೇ ಪ್ರತಿವಾದಿ ಸಹ ಮಾಡಿದ್ದಾರೆ ಎಂದರೆ ಸರಿ. ನಿಡಿ-2 ಕ್ಕೂ ಸಹ ವಾದಿ ನಂ. 1,3,4 ಮತ್ತು 1 ನೇ ಪ್ರತಿವಾದಿ ಸಹ ಮಾಡಿದ್ದಾರೆ ಎಂದರೆ ಸಾಕ್ಷಿ

ಸುಮ್ಮನೆ ನಿಲ್ಲುತ್ತಾರೆ. ನಿಡಿ-1 ಮತ್ತು 2 ಕ್ಕೆ ಏಕೆ ಸಹಿ ಮಾಡಲಾಗಿದೆ ಅಂತಾ ವಿಚಾರ ಮಾಡಿಲ್ಲ. ಸರಕಾರಿ ಸೌಲಭ್ಯ ಪಡೆಯಲು ಅಂತಾ ನಿಡಿ-1 ರಲ್ಲಿ ಬರೆದಿಲ್ಲ ಎಂದರೆ ನೆನಪಿಲ್ಲ. ನಾನು ನನ್ನ ವಕೀಲರಿಗೆ ವಾದಪತ್ರಕ್ಕೆ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ಮಾಹಿತಿ ನೀಡುವಾಗ ನಿಡಿ-1 ಮತ್ತು 2 ರ ಬಗ್ಗೆ ತಿಳಿಸಿದ್ದೆನೋ ಇಲ್ಲವೋ ಗೊತ್ತಿಲ್ಲ.

1996 ರಲ್ಲಿ ನಮ್ಮ ಮತ್ತು ನಮ್ಮ ಸಹೋದರ ಮತ್ತು ತಂದೆಯ ಮದ್ಯ ವಾಟ್ನಿಯಾಗಿ ನಮ್ಮ ನಮ್ಮ ಜಮೀನುಗಳನ್ನು ಪ್ರತ್ಯೇಕವಾಗಿ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಆ ಹಿಸ್ಸಾ ಪ್ರಕಾರ ಇವತ್ತಿನವರೆಗೂ ನಾವು ನಡೆದುಕೊಂಡು ಬಂದಿದ್ದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ರಿಸನಂ. 15, 60/1, 60/2 ಆಸ್ತಿಗಳನ್ನು 1 ನೇ ಪ್ರತಿವಾದಿ ಯಲ್ಲಪ್ಪ ವಾಟ್ನಿಯಾದ ಮೇಲೆ ಸ್ವಂತ ಖರೀದಿ ಮಾಡಿದ್ದಾನೆ ಎಂದರೆ ನೆನಪಿಲ್ಲ. ದಾವೆಯಲ್ಲಿ ತೋರಿಸಿದ ಟ್ರ್ಯಾಕ್ಟರ ಮತ್ತು ಹಿರೋಹೊಂಡಾ ಬೈಕ, ಮಹೇಂದ್ರ ಕಾರ್ ನ್ನು 1 ನೇ ಪ್ರತಿವಾದಿ ತನ್ನ ಸ್ವಂತ ಗಳಿಕೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ ಎಲ್ಲರೂ ಒಟ್ಟಿಗೆ ಇದ್ದಾಗ ಖರೀದಿ ಮಾಡಿದ್ದಾರೆ ಅಂತಾ ನುಡಿಯುತ್ತಾರೆ. ನನ್ನ ಹೆಸರಿಗೆ ಸಹ ನಾನು ಜಮೀನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಸಹ ಆಸ್ತಿ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ಅವರ ಹೆಸರಿಗೆ ಖರೀದಿ ಮಾಡಿದ್ದಾರೆ ಅಂತಾ ನುಡಿಯುತ್ತಾರೆ. 3 ನೇ ವಾದಿ ಸಹ ಜಮೀನು ಮತ್ತು ವಾಹನ ಖರೀದಿ ಮಾಡಿದ್ದಾರೆ ಎಂದರೆಸರಿ ಸಾಕ್ಷಿ ಮುಂದುವರೆದು ಅವುಗಳನ್ನು ನಮ್ಮ ತಂದೆ ಕಾಲದಲ್ಲಿ ಖರೀದಿ ಮಾಡಲಾಗಿದೆ ಅಂತಾ ನುಡಿಯುತ್ತಾರೆ.

ನಮ್ಮ ತಂದೆ 1997 ರಲ್ಲಿ ಮರಣ ಹೊಂದಿದ್ದಾರೆ. ನಮ್ಮ ತಂದೆ ಮರಣದ ನಂತರ ವಾರಸಾ ಮಾಡಲು ಅರ್ಜಿ ಕೊಟ್ಟಿರುತ್ತೇವೆ ಆದರೆ ಯಾವುದೇ ಖಾತಾ ಬದಲಾವಣೆ ಮಾಡಲು ಅರ್ಜಿ ಕೊಟ್ಟಿಲ್ಲ. ಆಗ ನಾವು ಸರಕಾರಿ ಸೌಲಭ್ಯ ಪಡೆಯಲು ಮಾಡಿಕೊಂಡು ಖಾತಾ ಬದಲಾವಣೆ ಯನ್ನು ಬದಲಾಯಿಸಿ ನಮ್ಮ ಹೆಸರಿಗೆ ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ನನ್ನ ತಂದೆ ಕಾಲದಲ್ಲಿಯೇ ನಮ್ಮ ಸಹೋದರರ ಮದ್ಯ ನಮ್ಮ ತಂದೆ ಸರಿಯಾಗಿ ಹಿಸ್ಸೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವು ಎಲ್ಲಾ ವಾದಿಯರಿಗೆ ಸಮನಾಗಿ ಆಸ್ತಿಬಂದಿದೆ ಎಂದರೆ ಸರಿ. ಪ್ರತಿ ವಾದಿಗೆ ಬಂದ ಆಸ್ತಿ ಅಷ್ಟೇ 1 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿ. ನಮ್ಮ ತಂದೆ ಪಾಲಿನ ಆಸ್ತಿ ಬಿಟ್ಟು ಉಳಿದ ಆಸ್ತಿಗಳಲ್ಲಿ ಹಿಸ್ಸೆ ಆಗಿವೆ ಎಂದರೆ ಸರಿಯಲ್ಲ. ನಾವು ಎಲ್ಲಾ ಆಸ್ತಿಗಳನ್ನು

ಒಟ್ಟಿಗೆಯಾಗಿ ವಹಿವಾಟು ಮಾಡುತ್ತಿದ್ದೇವೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ತನ್ನ ಪಾಲಿಗೆ ಬಂದ ಆಸ್ತಿಯಲ್ಲಿ ಅಡಿಕೆ ಬೆಳೆದಿದ್ದಾನೆ ಎಂದರೆ ಸಾಕ್ಷಿ ಕೂಡಿ ಇದ್ದಾಗ ಅಡಿಕೆ ಹಚ್ಚಿದ್ದೇವವೆ ಅಂತಾ ನುಡಿಯುತ್ತಾರೆ. ಸುಮಾರು 20 ವರ್ಷದ ಹಿಂದೆ ಅಡಿಕೆ ಹಚ್ಚಿದ್ದೇವೆ. 1996 ನೇ ಇಸ್ವಿ ನಂತರ 1 ನೇ ಪ್ರತಿವಾದಿ ಅಡಿಕೆ ಹಚ್ಚಿದ್ದ ಎಂದರೆ ಸಾಕ್ಷಿ ಎಲ್ಲರೂ ಒಟ್ಟಿಗೆ ಸೇರಿ ಅಡಿಕೆ ಹಚ್ಚಿದ್ದೇವೆ ಅಂತಾ ನುಡಿಯುತ್ತಾರೆ. ನಮ್ಮ ಹೆಸರಿನಲ್ಲಿರುವ ಆಸ್ತಿಗಳಲ್ಲಿ ಅಡಿಕೆ ಹಾಕಿದ್ದೇವೆ ಎಂದರೆ ಸಾಕ್ಷಿ 2 ವರ್ಷದ ಹಿಂದೆ ಅಡಿಕೆ ಹಚ್ಚಿದ್ದೇವೆ ಅಂತಾ ನುಡಿಯತ್ತಾರೆ. ನಾನು 2 ಎಕರೆ ಜವಿಕೀನಿನಲ್ಲಿ ಅಡಿಕೆ ಹಾಕಿದ್ದೇವೆ ಅಂತಾ ನುಡಿಯುತ್ತಾರೆ. 1 ,3,4 ವಾದಿ ಅಡಿಕೆ ಬೆಳೆದಿರುವುದಿಲ್ಲ. 1 ನೇ ಪ್ರತಿವಾದಿ ಜಮೀನಿನಲ್ಲಿ ಅಡಿಕೆ ಚೆನ್ನಾಗಿ ಬರುತ್ತಿದೆ ಎಂದರೆ ಸರಿ. ಆಕಾರಣದಿಂದ ನಾವು ವಾದಿಯರು 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಅಡಿಕೆ ತೋಟದಲ್ಲಿ ಪಾಲು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ದಾವೆ ಮಾಡಿದ್ದೇವೆ ಎಂದರೆ ಸಾಕ್ಷಿ ಹೌದು ಎಲ್ಲರೂ ಒಟ್ಟಿಗೆ ಸೇರಿ ಹಾಕಿದ್ದೇವು ಅಂತಾ ನುಡಿಯುತ್ತಾರೆ.

1 ನೇ ಪ್ರತಿವಾದಿ ತನ್ನ ಜಮೀನಿನಲ್ಲಿ ಅವನು ಮಾತ್ರ ಅಡಿಕೆ ಹಾಕಿದ್ದಾನೆ, ನಾವು ಯಾರು ವಾದಿಯರು ಹಾಕಿಲ್ಲ ಎಂದರೆ ಸರಿಯಲ್ಲ. ನಮ್ಮ ವಾದಪತ್ರದಲ್ಲಾಗಲೀ ಸಾಕ್ಷಿ ಪ್ರಮಾಣಪತ್ರದಲ್ಲಾಗಲಿ ನಾವು ಒಟ್ಟಾಗಿ ಅಡಿಕೆ ಬೆಳೆಯನ್ನು ಬೆಳೆದಿದ್ದೇವೆ ಅಂತಾ ಹೇಳಿಲ್ಲ ಎಂದರೆ ಸರಿ. ಈ ಹಿಂದೆ ವಾಟ್ನಿಯಾಗಿದ್ದರಿಂದ ನಮಗೆ 1 ನೇ ಪ್ರತಿವಾದಿ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಬಸಪ್ಪನ ಆಸ್ತಿಯಲ್ಲಿ ಮಾತ್ರ ಎಲ್ಲರಿಗೂ ಹಿಸ್ಸೆ ಇದೆ ಎಂದರೆ ಸರಿ.

ಈ ಎಲ್ಲಾ ಆಸ್ತಿಗೆ ಬೆಳೆವಿಮೆ ಮಾಡಿಸಿದ್ದೇವೆ ಎಂದರೆ ಸರಿ. 1,3,4 ನೇ ವಾದಿಯರು ಪ್ರತ್ಯೇಕವಾಗಿ ಬೆಳೆ ವಿಮೆ ಮಾಡಿಸಿದ್ದೇವೆ ಎಂದರೆ ಸರಿ, ಆದರೆ 1 ನೇ ಪ್ರತಿವಾದಿ ಯಲ್ಲಪ್ಪ ಮಾತ್ರ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಾರೆ ಅಂತಾ ನುಡಿಯುತ್ತಾರೆ. ಬೆಳೆ ವಿಮೆಯು ಪ್ರತ್ಯೇಕವಾಗಿ ನಮ್ಮ ನಮ್ಮ ಅಕೌಂಟ್ ಗೆ ಬಂದಿದೆ ಎಂದರೆ ಸರಿ ಸಾಕ್ಷಿಯು ಬ್ಯಾಂಕಿನಿಂದ ಹಣ ತೆಗೆಸಿ 1 ನೇ ಪ್ರತಿವಾದಿ ಹಣ ಪಡೆದುಕೊಂಡು ಹೋಗುತ್ತಾರೆ ಅಂತಾ ನುಡಿಯುತ್ತಾರೆ. ನಮ್ಮ ಎಲ್ಲರ ಪಡಿತರ ಚೀಟಿ ಪ್ರತ್ಯೇಕವಾಗಿವೆ ಎಂದರೆ ಸರಿ. ನಮ್ಮ ನಮ್ಮ ಪಡಿತರ ಚೀಟಿಯ ಪ್ರಕಾರ ನಾವು ಪ್ರತ್ಯೇಕವಾಗಿ ರೇಷನ ಪಡೆದುಕೊಳ್ಳುತ್ತೇವೆ ಎಂದರೆ ಸರಿ, ಸಾಕ್ಷಿ ಅದು ಒಂದೇ ಅಡುಗೆ ಮನೆಗೆ ಸೇರುತ್ತದೆ ಅಂತಾ

ನುಡಿಯುತ್ತಾರೆ. ಎಲ್ಲಾ ವಾದಿಯರಿಗೆ ಮತ್ತು 1 ನೇ ಪ್ರತಿವಾದಿಗೆ ಪ್ರತ್ಯೇಕವಾದ ಮನೆಗಳಿವೆ ಎಂದರೆ ಸರಿಯಲ್ಲ.

ನಾನು ನನ್ನ ಹೆಂಡತಿ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಿದ್ದೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ನಾವು ವಾದಿಯರು ಮತ್ತು 1 ನೇ ಪ್ರತಿವಾದಿಯು ಒಟ್ಟಾಗಿ ಒಂದೇ ಮನೆಯಲ್ಲಿಯೇ ಊಟ ಮಾಡುತ್ತೇವೆ. ನಾನು 1 ನೇ ಪ್ರತಿವಾದಿ ಬ್ಯಾಂಕಿನಿಂದ ಹಣ ಪಡೆದುಲಕೊಂಡು ಹೋಗುತ್ತಾನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದೇ ಮನೆಯಲ್ಲಿ ನಾವು ಮತ್ತು 1 ನೇ ಪ್ರತಿವಾದಿ ಒಟ್ಟಾಗಿ ಅಡುಗೆ ಮಾಡಿಕೊಂಡು ಊಟ ಮಾಡುತ್ತಿದ್ದೇವೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಆಸ್ತಿ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ. 22, 23, 25, 26 ಮತ್ತು 27 ಪರ ವಕೀಲರು ಗೈರು ಹಾಜರು ಇದ್ದು ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಪ್ರತಿವಾದಿ ನಂ. 2, 4, 7, 11, 13, 15, 24, 32, 34, 36, 37, 38, 39, 40, 44, 46, 45, 50, 51, 52, 56 ರ ಪರ ವಕೀಲರು ವಾದ ಪತ್ರ ಸಲ್ಲಿಸದೇ ಇರುವುದರಿಂದ ಅವರ ಪರವಾಗಿ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್